# ಕರ್ನಾಟಕ ಸರ್ಕಾರ

ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು- 560 012.

## ಅಧಿಕೃತ ಜ್ಞಾಪನ

ವಿಷಯ : ಶ್ರೀ ಆಶ್ರಯ ಜೆ, ದ್ವಿತೀಯ ದರ್ಜೆ ಸಹಾಯಕರು, ಉಪನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು ಇವರ ಅಮಾನತ್ತು ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸುವ ಬಗ್ಗೆ.

ಉಲ್ಲೇಖ :
1. ಈ ಕಚೇರಿ ಸಮಸಂಖ್ಯೆ ನಡವಳಿ ದಿನಾಂಕ: 30.09.2013
2. ಈ ಕಚೇರಿಯ ತಿಳುವಳಿಕೆಯ ಪತ್ರ ಸಂಖ್ಯೆ: ಪಪೂಶಿ/ಸಿಬ್ಬಂದಿ-1 ಎ (2) ನ ಸಹಿ ದೂರು 2012-13 ದಿನಾಂಕ: 14.07.2014
3. ಶ್ರೀ ಆಶ್ರಯ ಜೆ, ದ್ವಿತೀಯ ದರ್ಜೆ ಸಹಾಯಕರು, ಇವರ ಲಿಖಿತ ಹೇಳಿಕೆ ದಿನಾಂಕ: 26.11.2014.

-*-

ಪ್ರಸ್ತಾವನೆ :

ಶ್ರೀ ಆಶ್ರಯ ಜೆ, ದ್ವಿತೀಯ ದರ್ಜೆ ಸಹಾಯಕರು, ಉಪ ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು ಇವರು ಉಪನಿರ್ದೇಶಕರ ನಕಲು ಸಹಿ ಮಾಡಿ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಉಪನಿರ್ದೇಶಕರು, ಬೆಂಗಳೂರು ಉತ್ತರ ಜಿಲ್ಲೆ ಇವರ ವರದಿ ದಿನಾಂಕ: 26.09.2013 ರ ಆಧಾರದ ಮೇಲೆ ಮತ್ತು ಅವರ ವಿರುದ್ಧ ಇಲಾಖಾ ಶಿಸ್ತುಕ್ರಮಕ್ಕೆ ಸಾಕಷ್ಟು ಪುರಾವೆಗಳು ಕಂಡು ಬಂದ ಹಿನ್ನೆಲೆಯಲ್ಲಿ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಉಲ್ಲೇಖ 1 ರಲ್ಲಿ ಆದೇಶಿಸಲಾಗಿತ್ತು. ಶ್ರೀ ಆಶ್ರಯ ಜೆ, ದ್ವಿದಸ ಇವರು ಎಸಗಿದರೆನ್ನಲಾದ ಆರೋಪಗಳ ಮೇಲೆ ಉಲ್ಲೇಖ 1 ರಲ್ಲಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11 ರಡಿ ಆರೋಪ ಪಟ್ಟಿಯನ್ನು ಜಾರಿ ಮಾಡಿ, ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಆರೋಪಿ ನೌಕರರು ರಕ್ಷಣಾ ಹೇಳಿಕೆಯಲ್ಲಿ ಅರೋಪವನ್ನು ನಿರಾಕರಿಸಿರುತ್ತಾರೆ. ಆದುದರಿಂದ, ಸದರಿಯವರ ಮೇಲಿನ ಆರೋಪದ ಸತ್ಯಾಸತ್ಯತೆಯನ್ನು ತಿಳಿಯಲು

B:\D-New Volume\EST-1 A (2)\2014-15 1\COMPLAINTS\SUSPENSION & REINSTATION.docx

ಇಲಾಖಾ ವಿಚಾರಣೆಯನ್ನು ಜರುಗಿಸುವುದು ಅಗತ್ಯವೆಂದು ತೀರ್ಮಾನಿಸಿರುವುದರಿಂದ ಇವರ ಮೇಲಿನ ಆರೋಪಗಳ ವಿಚಾರಣೆ ಕಾಯ್ದಿರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆಃ ಪಪೂಶಿ ಸಿಬ್ಬಂದಿ-1 ಎ (2) ನಸಹಿ ದೂರು 10/2013-14 ದಿನಾಂಕಃ 03.02.2015.

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನಲೆಯಲ್ಲಿ ಶ್ರೀ ಆಶ್ರಯ ಜೆ, ದ್ವಿತೀಯ ದರ್ಜೆ ಸಹಾಯಕ, ಉಪನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು ಇವರ ಅಮಾನತ್ತನ್ನು ತೆರವುಗೊಳಿಸಿ, ಇಲಾಖಾ ವಿಚಾರಣೆ ಕಾಯ್ದಿರಿಸಿ ಸರ್ಕಾರಿ ಪದವಿ ಪೂರ್ವ ಕಾಲೇಜು, ದೊಮ್ಮಸಂದ್ರ, ಆನೇಕಲ್ ತಾಃ, ಬೆಂಗಳೂರು ದಕ್ಷಿಣ ಜಿಲ್ಲೆ ಇಲ್ಲಿನ ಖಾಲಿ ಹುದ್ದೆಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಸೇವೆಗೆ ಪುನರ್ ಸ್ಥಾಪಿಸಿ ಆದೇಶಿಸಿದೆ.

ಸಹಿ/-
ನಿರ್ದೇಶಕರು
ಹಾಗೂ ಶಿಸ್ತು ಪ್ರಾಧಿಕಾರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಃ

1. ನಿರ್ದೇಶಕರು/ಜಂಟಿ ನಿರ್ದೇಶಕರು/ಉಪನಿರ್ದೇಶಕರು (ಆ ) ರವರ ಆಪ್ತಶಾಖೆಗೆ.
2. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು ಇವರ ಮಾಹಿತಿಗೆ ಮತ್ತು ಮುಂದಿನ ಕ್ರಮಕ್ಕೆ.
3. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಬಸವನಗುಡಿ, ಬೆಂಗಳೂರು ಇವರ ಮಾಹಿತಿಗೆ.
4. ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ದೊಮ್ಮಸಂದ್ರ, ಆನೇಕಲ್ ತಾಃ, ಬೆಂಗಳೂರು ದಕ್ಷಿಣ ಜಿಲ್ಲೆ ಇವರ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕೆ.
5. ಶ್ರೀ ಆಶ್ರಯ ಜೆ, ದ್ವಿದಸ. ಮನೆ ನಂಃ 31, 2 ನೇ ಕ್ರಾಸ್, ಎಸ್‌ಬಿಎಂ, ಕಾಲೋನಿ, ಬೃಂದಾವನ ನಗರ, ಬೆಂಗಳೂರು 560054 ಇವರ ಮಾಹಿತಿಗೆ ಉಪನಿರ್ದೇಶಕರ ಮೂಲಕ.
6. ಲೆಕ್ಕಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮಾಹಿತಿಗೆ.
7. ಗಣಕಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
8. ಕಚೇರಿ ಪ್ರತಿ.

ನಿರ್ದೇಶಕರು
ಹಾಗೂ ಶಿಸ್ತು ಪ್ರಾಧಿಕಾರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ.

B:\D-New Volume\EST-1 A (2)\2014-15 1\COMPLAINTS\SUSPENSION & REINSTATION.docx